ಡಾ॥ ಎಂ.ಪಿ. ಕರ್ಕಿ : ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ. ಪರಿಶೀಲನೆ ಮಾಡಿ ತಮ್ಮ ಸಲಹೆಯನ್ನು ಗಮನಕ್ಕೆ ತೆಗೆದುಕೊಂಡು ಮಾಡುತ್ತಾರೆ. ವಾಟಾಳ್‌ರವರು ಹೊರಗಡೆ ಹೋಗಿದ್ದಾರೆಂದು ಕೊಂಡೆ, ಅವರು ಬಂದೇ ಬಿಟ್ಟರು.

ಶ್ರೀ ವಾಟಾಳ್ ನಾಗರಾಜ್ : ನೀವು ಇಲ್ಲಿ ಇರಬಾರದು ಎಂದು ಹೇಳಿದರೆ ಸುಲಭವಾಗಿ ಹೋಗುವುದಕ್ಕೆ ತಯಾರಾಗಿದ್ದೇನೆ.

ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳು

337 - ಶ್ರೀ ಮಂಜುನಾಥ್ ಸಿ. ಕುನ್ನೂರ (ಶಿಗ್ಗಾಂವ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಖಾಲಿ ಇರುವ ಪ್ರಾಥಮಿಕ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು)

ಆ) ಧಾರವಾಡ ಜಿಲ್ಲಾ ಶಿಗ್ಗಾಂವ ಸವಣೂರ ತಾಲ್ಲೂಕುಗಳಲ್ಲಿ ಖಾಲಿ ಇರುವ ಪ್ರಾಥಮಿಕ ಶಿಕ್ಷಕರ ಹುದ್ದೆಗಳೆಷ್ಟು?

ಇ) ಇವುಗಳನ್ನು ಎಷ್ಟು ದಿವಸಗಳಲ್ಲಿ ತುಂಬಲಾಗುವುದು?

ಈ) ಒಂದು ತರಗತಿಗೆ ಒಬ್ಬ ಶಿಕ್ಷಕರಂತೆ ನೇಮಕಾತಿ ಮಾಡಿಕೊಂಡಲ್ಲಿ ರಾಜ್ಯದಲ್ಲಿ ಎಷ್ಟು ಶಿಕ್ಷಕರನ್ನು ನೇಮಕ ಮಾಡಬೇಕಾಗುತ್ತದೆ?

ಉ) ಸದರಿ ಶಿಕ್ಷಕರನ್ನು ಭರ್ತಿ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ಅ) ದಿನಾಂಕ 31-3-95ರ ವರೆಗೆ ಉಂಟಾಗುವ ಖಾಲಿ ಹುದ್ದೆಗಳ ಸಂಖ್ಯೆ 13,170 (ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ತೋರಿಸಿದೆ).

ಆ) ಶಿಗ್ಗಾಂವ ತಾಲ್ಲೂಕಿನಲ್ಲಿ - 21

ಆ) ಸವಣೂರು ತಾಲ್ಲೂಕಿನಲ್ಲಿ - 21

ಇ) ಮುಂದಿನ ಶೈಕ್ಷಣಿಕ ವರ್ಷದಲ್ಲಿ ಭರ್ತಿ ಮಾಡಲಾಗುವುದು.

ಈ) 64,259 ಶಿಕ್ಷಕರನ್ನು ನೇಮಕ ಮಾಡಬೇಕಾಗುತ್ತದೆ.

ಉ) ಪ್ರತಿ ತರಗತಿಗೆ ಒಬ್ಬ ಶಿಕ್ಷಕ ಇರಬೇಕೆಂಬ ಸೂತ್ರವನ್ನು 2000ದ ಇಸವಿಯ ವೇಳೆಗೆ ಹಂತಹಂತವಾಗಿ ಗುರಿ ಮುಟ್ಟುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು ಪ್ರತಿ ವರ್ಷ 5,000 ಶಿಕ್ಷಕರ ಹುದ್ದೆಗಳನ್ನು ಸೃಜಿಸಲಾಗುತ್ತಿದೆ.

ಅನುಬಂಧ

ಜಿಲ್ಲಾವಾರು ಖಾಲಿ ಹುದ್ದೆಗಳ ವಿವರ

ಕ್ರ. ಸಂಖ್ಯೆ	ಜಿಲ್ಲೆಯ ಹೆಸರು		ಹುದ್ದೆಗಳ ಸಂಖ್ಯೆ
1.	ಬೆಂಗಳೂರು ಉತ್ತರ	:	59
2.	ಬೆಂಗಳೂರು ದಕ್ಷಿಣ	:	147
3.	ಬೆಂಗಳೂರು ಗ್ರಾಮಾಂತರ	:	735
4.	ತುಮಕೂರು	:	776
5.	ಕೋಲಾರ	:	351

6.	ಚಿತ್ರದುರ್ಗ	:	686
7.	ಶಿವಮೊಗ್ಗ	:	211
8.	ಮೈಸೂರು	:	378
9.	ಮಂಡ್ಯ	:	313
10.	ಮಡಿಕೇರಿ	:	136
11.	ಹಾಸನ	:	384
12.	ಚಿಕ್ಕಮಗಳೂರು	:	186
13.	ದಕ್ಷಿಣ ಕನ್ನಡ	:	912
14.	ಬೆಳಗಾವಿ	:	722
15.	ಬಿಜಾಪುರ	:	576
16.	ಧಾರವಾಡ	:	1213
17.	ಉತ್ತರ ಕನ್ನಡ	:	385
18.	ಗುಲ್ಬರ್ಗಾ	:	404
19.	ಬೀದರ್	:	595
20.	ರಾಯಚೂರು	:	310
21.	ಬಳ್ಳಾರಿ	:	495
		ಒಟ್ಟು	9974
	ಕಪ್ಪು ಹಲಗೆ ಕಾರ್ಯಾಚರಣೆ 5 ಮತ್ತು 6ನೇ ಹಂತದಲ್ಲಿ : ಮಂಜೂರಾದ ಹುದ್ದೆಗಳು ಒಟ್ಟು		3196
			13170

ಶ್ರೀ ಮಂಜುನಾಥ್ ಸಿ. ಕುನ್ನೂರು : ಸನ್ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ರಾಜ್ಯದಲ್ಲಿ ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆ 13,170 ಎಂದು ಹೇಳಿದ್ದಾರೆ. ಅದೇ ಪ್ರಕಾರವಾಗಿ ಅವರು ಮುಂದಿನ ಶೈಕ್ಷಣಿಕ ವರ್ಷದಲ್ಲಿ ಅವುಗಳನ್ನು ಭರ್ತಿ ಮಾಡಲಾಗುವುದು ಎಂದು ಹೇಳಿದ್ದಾರೆ. ಮತ್ತೆ ಒಂದು ತರಗತಿಗೆ ಒಬ್ಬ ಶಿಕ್ಷಕರಂತೆ 64,259 ಶಿಕ್ಷಕರನ್ನು ನೇಮಕ ಮಾಡಬೇಕಾಗುತ್ತದೆ. ಅದರ ಪೈಕಿ ವರ್ಷಕ್ಕೆ 5 ಸಾವಿರ ಶಿಕ್ಷಕರ ಹುದ್ದೆ ಸೃಷ್ಟಿ ಮಾಡುತ್ತೇವೆಂದು ಹೇಳಿದ್ದಾರೆ. ಅವರು ಹೇಳಿದಂತೆ 13,170 ಶಿಕ್ಷಕರು ಹಾಗೂ 5 ಸಾವಿರ ಶಿಕ್ಷಕರನ್ನು ತೆಗೆದುಕೊಳ್ಳುತ್ತಾರೋ ಅಥವಾ ಒಟ್ಟಾರೆ ಎಲ್ಲಾ ಶಿಕ್ಷಕರ ಪೈಕಿ ಐದು ಸಾವಿರ ಶಿಕ್ಷಕರನ್ನು ತೆಗೆದುಕೊಳ್ಳುತ್ತಾರೋ ಎಂಬ ಬಗ್ಗೆ ಮಾನ್ಯ ಸಚಿವರು ಹೇಳಬೇಕು. ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಒತ್ತನ್ನು ಕೊಡಬೇಕು ಮತ್ತು ಅದರ ಗುಣ ಮಟ್ಟವನ್ನು ಸರ್ಕಾರೀ ಪ್ರಾಥಮಿಕ ಶಾಲೆಗಳಲ್ಲಿ ಹೆಚ್ಚಿಸತಕ್ಕಂತಹ ಕೆಲಸ ಏನು ಮಾಡುತ್ತಾರೆ ಎನ್ನುವುದರ ಬಗ್ಗೆ ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೆ, ಈ ವರ್ಷ 13,170 ಉಪಾಧ್ಯಾಯರ ಅವಶ್ಯಕತೆಯಿದೆ ಎಂದು ತಮಗೆ ಉತ್ತರ ಕೊಟ್ಟಿದ್ದೇವೆ. ಅದರಲ್ಲಿ ಬ್ಲಾಕ್‌ಬೋರ್ಡ್ ಸ್ಕೀಂನಲ್ಲಿ ಪ್ರತಿ ವರ್ಷ ಐದೈದು ಸಾವಿರ ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳುವಂತಹ ಸಂಪ್ರದಾಯ ಇದೆ. ಆ ಪ್ರಕಾರ 5 ಸಾವಿರ

ಉಪಾಧ್ಯಾಯರನ್ನು ಈ ವರ್ಷ ತೆಗೆದುಕೊಳ್ಳುತ್ತೇವೆ. ಬಾಕಿ ಉಳಿದಿರತಕ್ಕಂತಹ ಹುದ್ದೆಗಳನ್ನು ಈ ವರ್ಷ ಭರ್ತಿ ಮಾಡತಕ್ಕಂಥ ವ್ಯವಸ್ಥೆ ಮಾಡುತ್ತೇವೆ ಎಂದು ಅವರಿಗೆ ನಾನು ಆಶ್ವಾಸನೆ ಕೊಡುತ್ತೇನೆ.

ಶ್ರೀ ಮಂಜುನಾಥ್ ಸಿ. ಕುನ್ನೂರ : ಕೇವಲ ನೀವು 5 ಸಾವಿರ ಶಿಕ್ಷಕರನ್ನು ಭರ್ತಿ ಮಾಡಿದರೆ, ಇದು ಇಡೀ ರಾಜ್ಯದ ಜನತೆಗೆ ತಪ್ಪು ಎಸಗಿದ ಹಾಗೆ ಆಗುತ್ತದೆ. ಹಿಂದೆ 199-95ರಲ್ಲಿ ನಮ್ಮ ಸರ್ಕಾರ ಇದ್ದಾಗ ಕನಿಷ್ಟ 16 ಸಾವಿರ ಶಿಕ್ಷಕರನ್ನು ಭರ್ತಿ ಮಾಡಿ ಕೊಂಡೆವು. ಕಳೆದ ಸುಮಾರು 3-4 ವರ್ಷಗಳಲ್ಲಿ 35 ಸಾವಿರ ಶಿಕ್ಷಕರನ್ನು ಭರ್ತಿ ಮಾಡಿಕೊಳ್ಳತಕ್ಕಂಥ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ. ಉಳಿದಂತಹ ಶಿಕ್ಷಕರನ್ನು ತಾವು ಭರ್ತಿ ಮಾಡದೇ ಹೋದರೆ ಬಹಳ ಅನ್ಯಾಯವನ್ನು ನಾವು ಈ ಪ್ರಾಥಮಿಕ ಶಿಕ್ಷಣಕ್ಕೆ ಹಾಗೆ ಆಗುತ್ತದೆ. ಆ ಕಾರಣ ಹೆಚ್ಚು ಶಿಕ್ಷಕರನ್ನು ಭರ್ತಿ ಮಾಡಿಕೊಳ್ಳುವಂತಹ ಕೆಲಸವನ್ನು ಮಾಡಬೇಕು. ಜೊತೆಗೆ ಗ್ರಾಮಾಂತರ ಪ್ರದೇಶದಿಂದ ಪಟ್ಟಣಕ್ಕೆ ಡೆಪ್ಯೂಟೇಷನ್ ಮೇಲೆ ಕೆಲವು ಶಿಕ್ಷಕರನ್ನು ಹಾಕುತ್ತೀರಿ. ಅದನ್ನೂ ಕೂಡ ತಾವು ಬಂದ್ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : 13,170 ಉಪಾಧ್ಯಾಯರನ್ನು ಈ ವರ್ಷ ನೇಮಕ ಮಾಡಿಕೊಳ್ಳುವಂತಹ ವ್ಯವಸ್ಥೆಯಾಗಿದೆ. ಅದು 5 ಸಾವಿರ ಅಲ್ಲ, ಒಟ್ಟು 13,170ಉಪಾಧ್ಯಾಯರುಗಳನ್ನು ನಾವು ನೇಮಕ ಮಾಡಿಕೊಳ್ಳುತ್ತೇವೆ. ನಂತರ ಹಳ್ಳಿಗಳಿಂದ ಪಟ್ಟಣಕ್ಕೆ ಬರತಕ್ಕಂಥ ಉಪಾಧ್ಯಾಯರುಗಳ ಸಂಖ್ಯೆ ಜಾಸ್ತಿಯೆಂದು ತಾವು ಏನು ಹೇಳುತ್ತಿದ್ದೀರಿ ಅದನ್ನು ಸಹ ಕೂಲಂಕಷವಾಗಿ ಪರಿಶೀಲನೆ ಮಾಡಿ ಪಟ್ಟಣದಲ್ಲಿ ಇರತಕ್ಕಂಥ ಅನೇಕ ಜನ ಉಪಾಧ್ಯಾಯರನ್ನು ಹಳ್ಳಿಗೆ ಹಾಕತಕ್ಕಂಥ ವ್ಯವಸ್ಥೆ ಮಾಡುತ್ತೇವೆ ಎಂದು ತಮಗೆ ನಾನು ಆಶ್ವಾಸನೆ ಕೊಡುತ್ತೇನೆ.

ಶ್ರೀ ಹೆಚ್.ಕೆ. ಕುಮಾರ ಸ್ವಾಮಿ : ತಾವು ಈ ರೀತಿ ನೇಮಕ ಮಾಡಿಕೊಳ್ಳುವಾಗ ಈಗ ಇರತಕ್ಕಂಥ ನಿರುದ್ಯೋಗಿ ಶಿಕ್ಷಕರನ್ನು ಏನಿದ್ದಾರೆ, ತರಬೇತಿ ಪಡೆದಿರತಕ್ಕಂಥವರು ಏನಿದ್ದಾರೆ, ಅವರನ್ನು ವಯಸ್ಸು ಮತ್ತು ಅರ್ಹತೆ ಮೇಲೆ ತಾವೇನಾದರೂ ನೇಮಕಾತಿ ಮಾಡುತ್ತೀರೋ? ದಯಮಾಡಿ ಅವರನ್ನು ಈ ರೀತಿ ನೇಮಕ ಮಾಡಬೇಕು ಎಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಆ ಬಗ್ಗೆ ನಾನು ಸಹಾನುಭೂತಿಯಿಂದ ಪರಿಶೀಲನೆ ಮಾಡಿ ನೋಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಹೇಳುವುದನ್ನು ಪರಿಶೀಲನೆಯನ್ನು ಪ್ರಿಂಟ್ ಮಾಡಿಕೊಟ್ಟರೆ ಚೆನ್ನಾಗಿ ಇರುತ್ತದೆ

ಶ್ರೀ ಹೆಚ್.ಕೆ. ಕುಮಾರ ಸ್ವಾಮಿ : ಅದನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡಲಿ. ಆದರೆ ಸರ್ಕಾರ ತತ್ವಶಃ ಇದನ್ನು ಒಪ್ಪಬೇಕು ಎಂದು ನಮ್ಮ ಒತ್ತಾಯ. ಏಕೆಂದರೆ ಸುಮಾರು 30-35 ವರ್ಷ ದಾಟಿರತಕ್ಕಂಥವರು ಬಹಳ ಜನ ಇದ್ದಾರೆ. ಆದರೆ ಇಂದು 22-23 ವರ್ಷದವರೆಗೆ ಬರುತ್ತಿದ್ದಾರೆ.

ಅಧ್ಯಕ್ಷರು : ಪಾರ್ಟಿ ಮೀಟಿಂಗ್‌ನಲ್ಲಿ ಪ್ರಯೋಜನ ಮಾಡಿಕೊಳ್ಳಿ

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೆ, 13,170 ಉಪಾಧ್ಯಾಯರ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ ಎಂದು ಹೇಳುತ್ತಿದ್ದಾರಲ್ಲ, ಅದನ್ನು ಈ ವರ್ಷದ ಪ್ರಾಥಮಿಕ ಹಂತದಲ್ಲಿ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಪ್ರಾಥಮಿಕ ಹಂತದಲ್ಲಿ

ಎಂದರೆ ಜೂನ್ ತಿಂಗಳ ಮೊದಲಿಗೆ ಭರ್ತಿ ಮಾಡುತ್ತಾರೆಯೇ? ಅಥವಾ ಈ ವರ್ಷದ ಕೊನೆಗೆ ಭರ್ತಿ ಮಾಡುತ್ತಾರೆಯೇ? ಎಂದು ಸ್ಪಷ್ಟೀಕರಣ ಬೇಕಾಗಿದೆ ಇದು ಯಾವಾಗ ಎಂದು ಸ್ಪಷ್ಟೀಕರಣ ಕೊಟ್ಟರೆ ಚೆನ್ನಾಗಿರುತ್ತದೆ. ಇದನ್ನು ಕೊನೆಯ ಅಥವಾ ಮೊದಲನೆ ಹಂತಕ್ಕೆ ಮಾಡುತ್ತೀರೋ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಿಗೆ ಶಿಕ್ಷಕರ ಸಂಖ್ಯೆ ವಿದ್ಯಾರ್ಥಿಗಳ ಅನುಪಾತಕ್ಕೆ ತಕ್ಕಂತೆ ಇಲ್ಲ. ಬಹಳ ಹಿಂದೆ ಸ್ಯಾಂಕ್ಷನ್‌ಸ್ಟ್ರೆಂಗ ಏನು ಇತ್ತೋ ಅದರ ಆಧಾರದ ಮೇಲೆ ನೀವು ಭರ್ತಿ ಮಾಡುತ್ತಿದ್ದೀರಿ. ಈಗ ಇರುವ ಸ್ಯಾಂಕ್ಷನ್‌ಸ್ಟ್ರೆಂಗನ್ನು ಪುನರ್ ಪರಿಶೀಲನೆ ಮಾಡಿ ಅದರ ಆಧಾರದ ಮೇಲೆ ಏನಾದರೂ ಶಿಕ್ಷಕರು ಮಾಡದೆ ಇದ್ದರೆ ನಮ್ಮ ಪಠ್ಯಸ್ ಸರಿಯಾಗುವುದಿಲ್ಲ. ಮಕ್ಕಳು 150 ಇದ್ದಾರೆ, ಅಪದ ಆಧಾರದ ಮೇಲೆ 2-3 ಶಿಕ್ಷಕರು ಇದ್ದಾರೆ. ಈಗ ಇದಕ್ಕೆ ತಮ್ಮ ಕಾಲದಲ್ಲಿ ವಿಶೇಷ ಗಮನ ಕೊಡಬಹುದು. ಎಂದು ನಾನು ಭಾವಿಸಿದ್ದೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ನಮಗೆ 1:40 ಎಂದು ರೇಷಿಯೊ ಇದೆ. 40 ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾಯರನ್ನು ನೇಮಕ ಮಾಡಿತಕ್ಕಂಥ ರೀತಿಯಲ್ಲಿ 13,170 ಜನ ಉಪಾಧ್ಯಾಯರುಗಳು ಬೇಕಾಗುತ್ತದೆ. ಆದಷ್ಟು ಮಟ್ಟಿಗೆ ನಾವು ಈ ವರ್ಷ ಈ ರೇಷಿಯೋವನ್ನು ಮೇಂಟೀನ್ ಮಾಡುತ್ತೇವೆ.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೆ, ಉಪಾಧ್ಯಾಯರ ವಯೋಮಿತಿ ಬಗ್ಗೆ ಮಾತನಾಡುತ್ತಿದ್ದರು. ಹಿಂದೆ ಮಾನ್ಯ ಗುಂಡುರಾವ್‌ರವರ ಸರ್ಕಾರ ಇದ್ದಾಗ ಏನಾಯಿತೆಂದರೆ ಟಿಸಿಹೆಚ್ ಆದವರನು ತೆಗೆದುಕೊಳ್ಳಬೇಕಾದರೆ ನಾವು ಒಂದು ದಿನ ಪ್ರಾಸಂಗಿಕವಾಗಿ ಪ್ರಸ್ತಾಪ ಮಾಡಿದೆವು. ವಯಸ್ಸು ಆದವರೆಲ್ಲಾ ಇದ್ದಾರೆ, ಅವರಿಗೆ ಮದುವೆ ಆಗಿದೆ, ಮಕ್ಕಳು ಇದ್ದಾವೆ, ಆದ್ದರಿಂದ ವಯೋಮಿತಿಯಲ್ಲಿ ಇಷ್ಟು ವರ್ಷ ಆದವರು ಅಪ್ಲೈ ಮಾಡುವ ಹಾಗೆ ಇಲ್ಲ ಎಂದು ಮಾಡಿ ಎಂದು. ಅವರು ಏನು ಮಾಡಿದರು ಎಂದರೆ 29 ವರ್ಷ ಮಿನಿಮಂ, ಹಾಗೂ 40 ವರ್ಷ ಗರಿಷ್ಟ ಎಂದು ಮಾಡಿದರು. ಇದರಲ್ಲಿ ಏನಾಗಿದೆ ಎಂದರೆ ಈ ಹಂತದಲ್ಲಿ ಟಿಸಿಹೆಚ್ ಆಗಿರುವವರೆಲ್ಲ ಬಹಳ ಹಿಂದುಳಿದ ವರ್ಗದವರು, ಶೂದ್ರ ಸಮಾಜದವರು, ಅವರ ಮಕ್ಕಳೆಲ್ಲಾ ಮದುವೆಗೆ ಬಂದಂತಹ ವಯಸ್ಸಿನವರು ಇದ್ದರೂ ಇವರೆಲ್ಲಾ ಕೆಲಸಕ್ಕೆ ಇನ್ನೂ ಪರದಾಡುತ್ತಾ ಕುಳಿತಿದ್ದಾರೆ. ಆ ವಯೋಮಿತಿ ಬಗ್ಗೆ ಕನಿಷ್ಟ 30 ವರ್ಷದ ಮೇಲೆ ಅಪ್ಲೈ ಮಾಡಬೇಕು ಎಂದು ಮಾಡಿ. ಗುಂಡುರಾವ್‌ರವರು ಇದ್ದಂತಹ ಕಾಲದಲ್ಲಿ ಮಾಡಿದರಲ್ಲ ಆ ರೀತಿ ಮಾಡಿದರೆ ಅನುಕೂಲವಾಗುತ್ತದೆಯೇ ವಿನಃ ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆಂದು ನಿಲ್ಲಿಸುವುದಕ್ಕೆ ಆಗುವುದಿಲ್ಲ. ನೀವು ಇದರ ಬಗ್ಗೆ ಏನಾದರೂ ಮಾಡಬೇಕಾಗುತ್ತದೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ನಿಮ್ಮ ಸಲಹೆ ಸೂಕ್ತವಾಗಿದೆ, ಅದರ ಬಗ್ಗೆ ವಿಚಾರಿಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಈ ಉತ್ತರದಲ್ಲಿ 2000 ಇಸವಿ ವೇಳೆಗೆ ನಾವು ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ ಎಂದು ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ ಆ ಪ್ರಕಾರ 5 ವರ್ಷದಲ್ಲಿ 2000 ಇಸವಿ ಆಗುತ್ತದೆ. ಈ 5 ವರ್ಷದಲ್ಲಿ 65 ಸಾವಿರ ಹುದ್ದೆಗಳನ್ನು ತುಂಬಬೇಕಾದರೆ, ಒಂದು ವರ್ಷಕ್ಕೆ ಕನಿಷ್ಟ ಎಂದರೂ 15 ಸಾವಿರ ತೆಗೆದುಕೊಳ್ಳಬೇಕಾಗುತ್ತದೆ. ಆದರೆ ನೀವು

ತೆಗೆದುಕೊಳ್ಳುತ್ತಾ ಇರತಕ್ಕಂಥಾದ್ದು 5000 ಹುದ್ದೆಗಳು ಎಂದು ಹೇಳಿದರೆ ನೀವು ಈ ಸಭೆಗೆ ತಪ್ಪು ಮಾಹಿತಿ ಕೊಡುತ್ತಿದ್ದೀರಿ ಎನ್ನುವ ಕಲ್ಪನೆ ಬರುತ್ತದೆ. ಈ 64 ಸಾವಿರ ಹುದ್ದೆಗಳು ಏನಿವೆ ಅವು ಸ್ಯಾಂಕ್ಷನ್ ಆಗಿರತಕ್ಕಂಥ ಪೋಸ್ಟ್‌ಗಳು. ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದೆ, ತಾವು ಸಹ ಒಂದು ಕ್ಷೇತ್ರದಿಂದ ಬಂದಿದ್ದೀರಿ, ಹಳ್ಳಿಗಾಡಿನಲ್ಲಿ ಓದಾಡಿದ್ದೀರಿ. ಎಷ್ಟೋ ಸ್ಕೂಲ್‌ಗಳಲ್ಲಿ ಪೋಸ್ಟ್‌ಗಳು ಸ್ಯಾಂಕ್ಷನ್ ಆಗಿಲ್ಲ. ಮಕ್ಕಳ ಸಂಖ್ಯೆ ಜಾಸ್ತಿಯಾಗುತ್ತಿದೆ. 5-6 ವರ್ಷಗಳಾದರೂ ಕೂಡ ನನಗೆ ಜ್ಞಾಪಕ ಇರುವ ಹಾಗೆ 1982ರಲ್ಲಿ ಬಿಟ್ಟರೆ 1995ರವರೆಗೂ ಸಹ ಪೋಸ್ಟ್‌ಗಳು ಸ್ಯಾಂಕ್ಷನ್ ಆಗಿಲ್ಲ. ಅವರು ಹೇಳಿದ ಪ್ರಕಾರ 40 ಮಕ್ಕಳಿಗೆ ಲೆಕ್ಕ ಹಾಕಿದರೆ ಎಷ್ಟು ಬೇಕಾಗುತ್ತದೆ. ಅದು ಬಹಳ ಪ್ರಮುಖವಾದ ಪ್ರಶ್ನೆ. ಇವರು ಈ ರೀತಿ ಉತ್ತರ ಕೊಡುವುದು ಸರಿಯಲ್ಲ. ನೀವು ಇದರ ಬಗ್ಗೆ ನಿರ್ದಿಷ್ಟವಾಗಿ ಹೇಳಬೇಕು ಎಷ್ಟು ಜನರನ್ನು ಭರ್ತಿ ಮಾಡುತ್ತಾರೆ ಎಂದು. ನನ್ನ ಒಂದೇ ಕ್ಷೇತ್ರಕ್ಕೆ 200 ಜನ ಬೇಕಾಗಿದ್ದಾರೆ. ಇವತ್ತು ತುಮಕೂರು ಜಿಲ್ಲೆ ಒಂದಕ್ಕೆ 200 ಜನ ಬೇಕು. ಆದರೆ 355 ಜನ ಎನ್ನುವ ಅಂಕಿ ಅಂಶ ಕೊಟ್ಟಿದ್ದಾರೆ. ಆದ್ದರಿಂದ ದಯಮಾಡಿ ತಾವು ಮರು ಪರಿಶೀಲನೆ ಮಾಡಬೇಕು. ಅಧಿಕಾರಿ ಕೊಟ್ಟಿರತಕ್ಕಂಥ ವಿಷಯವನ್ನು ನೀವು ಹೇಳಬಾರದು.

ಅಧ್ಯಕ್ಷರು : ನೀವು ಪ್ರಶ್ನೋತ್ತರ ವೇಳೆಯ ಬಗ್ಗೆ ಅರ್ಥ ಮಾಡಿಕೊಳ್ಳಬೇಕು. ಇನ್ನೂ 10 ಜನ ಮೊದಲ ಬಾರಿಗೆ ಇಲ್ಲಿಗೆ ಬಂದಿರತಕ್ಕಂಥವರು ಕೈ ಎತ್ತಿದ್ದಾರೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ನಾವು ಉತ್ತರವನ್ನು ಸರಿಯಾದ ರೀತಿಯಲ್ಲಿ ಕೊಟ್ಟಿದ್ದೇವೆ. 13,170 ಉಪಾಧ್ಯಾಯರುಗಳನ್ನು ಈ ವರ್ಷ ನೇಮಕ ಮಾಡಿಕೊಳ್ಳುತ್ತೇವೆ ಎಂದು ಹೇಳಿದ್ದೇವೆ. ಇನ್ನು 68,259 ಜನ ಉಪಾಧ್ಯಾಯರುಗಳ ಅವಶ್ಯಕತೆ ಇದೆ ಎಂದು ಹೇಳಿದ್ದೇವೆ, ಕ್ಲಾಸಿಗೆ ಒಂದರಂತೆ. 1ರಿಂದ 7ರವರೆಗೆ 7ಜನ ಉಪಾಧ್ಯಾಯರು. ಈಗ ಅನೇಕ ಕಡೆ 1ರಿಂದ 7ನೇ ಕ್ಲಾಸಿರವರೆಗೆ ಇದ್ದರೆ 3-4 ಜನ ಉಪಾಧ್ಯಾಯರುಗಳು ಇದ್ದಾರೆ. ಇವರು ಕೇಳುತ್ತಿರತಕ್ಕಂಥಾದ್ದರಲ್ಲಿ ಒಂದೊಂದು ಕ್ಲಾಸಿದೆ ಒಬ್ಬೊಬ್ಬರು ಉಪಾಧ್ಯಾಯರಂತೆ ಒಟ್ಟು 64,259 ಉಪಾಧ್ಯಾಯರ ಅವಶ್ಯಕತೆ ಇದೆ, ಒಂದೊಂದು ಕ್ಲಾಸಿಗೆ ಒಬ್ಬೊಬ್ಬ ಉಪಾಧ್ಯಾಯರನ್ನು ನೇಮಕ ಮಾಡುವುದಾದರೆ. ಆದರೆ ಈಗಿನ ಪರಿಸ್ಥಿತಿಯಲ್ಲಿ ನಾವು 13,170 ಜನರನ್ನು ನೇಮಕ ಮಾಡಿಕೊಳ್ಳುತ್ತೇವೆ. ಇದೇ ರೀತಿ 5 ವರ್ಷದಲ್ಲಿ ಭರ್ತಿಯಾಗುತ್ತದೆ ಎಂದು ನಾನು ಹೇಳುತ್ತೇನೆ.

ಶ್ರೀ ಬಿ. ಶಿವರಾಮು : ಮಾನ್ಯ ಅಧ್ಯಕ್ಷರೆ, ಈ ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳುವಂತಹ ಸಂದರ್ಭದಲ್ಲಿ ಬಹಳ ಹಳ್ಳಿಗಳಲ್ಲಿ ಬ್ರಾಂಚ್ ಸ್ಕೂಲ್‌ಗಳು ಅಂದರೆ ಶಾಖಾ ಶಾಲೆಗಳು ನಡೆಯುತ್ತವೆ. 30, 35, 40 ಮಕ್ಕಳು ಇರುವಂತಹ ಶಾಖಾ ಶಾಲೆಗಳನ್ನು 7-8 ವರ್ಷಗಳಿಂದ ಜಿಲ್ಲಾಪರಿಷತ್ತಿನಿಂದ ಪ್ರಾರಂಭ ಮಾಡಿ ಹಾಗೆ ನಿರಂತರವಾಗಿ ನಡೆದುಕೊಂಡು ಬರುತ್ತವೆ. ಅಲ್ಲಿ ಉಪಾಧ್ಯಾಯರುಗಳು ಇಲ್ಲ, ಪೀಠೋಪಕರಣಗಳು ಇಲ್ಲ, ಕೆಲವು ಕಡೆ ಶಾಲಾ ಕಟ್ಟಡವನ್ನು ಕಟ್ಟಿದ್ದಾರೆ. ತಾವು ಇನ್ನು ಮುಂದೆ ನೇಮಕಾತಿ ಮಾಡತಕ್ಕಂಥ ಸಂದರ್ಭದಲ್ಲಿ ಆ ಶಾಖಾ ಶಾಲೆಗಳನ್ನು ಮೊದಲು ರೆಗ್ಯೂಲರೈಸ್ ಮಾಡಿ, ಅದಕ್ಕೂ ನೇಮಕಾತಿ ಕೊಡತಕ್ಕಂಥಾದ್ದನ್ನು ಮಾಡಬೇಕು. ಇಲ್ಲ ಎಂದರೆ ಏನಾಗುತ್ತದೆ ಬ್ಲಾಕ್ ಬೋರ್ಡ್ ಆಪರೇಷನ್ ಇರತಕ್ಕಂಥ ಶಾಲೆಗಳಲ್ಲಿ 2 ಉಪಾಧ್ಯಾಯರನ್ನು ಕೊಟ್ಟಿದ್ದೀರಿ. ಅವರಲ್ಲಿ ಒಬ್ಬರನ್ನು ತೆಗೆದು ಇಲ್ಲಿ ಬ್ರಾಂಚ್ ಸ್ಕೂಲಿಗೆ ನೀವು ಡೆಪ್ಯೂಟೇಷನ್ ಕಳುಹಿಸುತ್ತೀರಿ. ಅಲ್ಲಿಗೂ ಮೇಸ್ಟರು ಇಲ್ಲ ಇದು ರೆಗ್ಯೂಲರೈಸ್ ಆಗಲಿಲ್ಲ, ಆದುದರಿಂದ ಮೊದಲು ರಾಜ್ಯದಲ್ಲಿ ಎಷ್ಟು ಶಾಖಾ ಶಾಲೆಗಳು ಇವೆ ಅವನ್ನು ಗಣನೆಗೆ ತೆಗೆದುಕೊಂಡು ಅವನ್ನು ರೆಗ್ಯೂಲರೈಸ್

ಮಾಡತಕ್ಕಂಥ ಕೆಲಸ ಮಾಡಬೇಕು. ನನ್ನ ಕ್ಷೇತ್ರದಲ್ಲಿಯೇ 37 ಶಾಖಾ ಶಾಲೆಗಳು 7-8 ವರ್ಷಗಳಿಂದ ನಡೆದುಕೊಂಡು ಬರುತ್ತಿವೆ. ಆದುದರಿಂದ ದಯವಿಟ್ಟು ಅದನ್ನು ಗಮನಕ್ಕೆ ತೆಗೆದುಕೊಳ್ಳಬೇಕು ಎಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಬಿ.ಆರ್. ಪಾಟೀಲ್ : ಈ ಪ್ರಾಥಮಿಕ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವಂತಹ ಸಂದರ್ಭದಲ್ಲಿ ಗೌರವ ಶಿಕ್ಷಕರು ಎಂದು ಹೇಳಿ ಬಹಳ ವರ್ಷಗಳಿಂದ ವೇತನ ರಹಿತವಾಗಿ ಕೆಲಸ ಮಾಡುತ್ತಿರುವಂತಹವರಿಗೆ ವಿಶೇಷ ಪ್ರಾತಿನಿಧ್ಯ ಕೊಟ್ಟು ಅವರನ್ನು ಈ ಒಂದು ಭರ್ತಿಯಲ್ಲಿ ಹೆಚ್ಚಿನ ಕೃಪಾಂಕಗಳನ್ನು ಕೊಡಬೇಕು. ಅವರ ಪರಿಸ್ಥಿತಿ ಬಹಳ ಗಂಭೀರವಾಗಿದೆ. ನನ್ನ ಜಿಲ್ಲೆಯಲ್ಲಿ ಸುಮಾರು 200 ಜನ ಇಂತಹ ಗೌರವ ಶಿಕ್ಷಕರು ಅತ್ಯಂತ ಗಂಭೀರ ಪರಿಸ್ಥಿತಿಯಲ್ಲಿ ಇದ್ದಾರೆ. ದಯವಿಟ್ಟು ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಯೋಚನೆ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಇದು ನಮ್ಮ ಅವಧಾನಕ್ಕೆ ಬಂದಿದೆ. ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ.

ಪ್ರತಿ ತಾಲ್ಲೂಕಿಗೊಂದು ಕ್ರೀಡಾಂಗಣ

34 - ಶ್ರೀ ವಸಂತ ವಿ. ಸಾಲಿಯಾನ (ಕಾಪು) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಪ್ರತಿ ತಾಲ್ಲೂಕಿಗೆ ಒಂದು ಕ್ರೀಡಾಂಗಣ ನಿರ್ಮಿಸುವ ಯೋಜನೆ ಸರ್ಕಾರದವರ ಪರಿಶೀಲನೆಯಲ್ಲಿ ಇದೆಯೇ?*

ಆ) *ಹಾಗಿದ್ದಲ್ಲಿ ಈವರೆಗೆ ಎಷ್ಟು ತಾಲ್ಲೂಕುಗಳಲ್ಲಿ ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದೆ. ಇದಕ್ಕಾಗಿ ಖರ್ಚಾದ ಹಣ ಎಷ್ಟು (ಜಿಲ್ಲಾವಾರು ವಿವರ ನೀಡುವುದು)*

ಶ್ರೀ ಅಜಯಕುಮಾರ್ ಸರ್‌ನಾಯಕ್ (ಯುವಜನ ಸೇವಾ ಮತ್ತು ಕ್ರೀಡಾ ಸಚಿವರು) :

ಅ) ಹೌದು

ಆ) ಈವರೆಗೆ 68 ತಾಲ್ಲೂಕುಗಳಲ್ಲಿ ಕ್ರೀಡಾಂಗಣಗಳನ್ನು ನಿರ್ಮಿಸಲು ಸರ್ಕಾರದ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದ್ದು, ಈಗಾಗಲೇ ಹೊಸಕೋಟೆ ಕ್ರೀಡಾಂಗಣದ ನಿರ್ಮಾಣ ಕಾರ್ಯವು ಮುಕ್ತಾಯಗೊಂಡಿದೆ ಮತ್ತು ಇನ್ನುಳಿದ ಕ್ರೀಡಾಂಗಣಗಳ ನಿರ್ಮಾಣ ಕಾರ್ಯಗಳು ವಿವಿಧ ಹಂತದಲ್ಲಿವೆ. ಈ ನಿರ್ಮಾಣ ಕಾರ್ಯಗಳಿಗಾಗಿ ಇಲ್ಲಿಯವರೆಗೆ ಮಾಡಲಾಗಿರುವ ಖರ್ಚಿನ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.